# ದೃಶ್ಯ ವೈಭವ

ಒಂದು ಕಾಲದಲ್ಲಿ ನಮ್ಮಷ್ಟಕ್ಕೆ ನಾವು ನೋಡಿ ಸಂಭ್ರಮಿಸಬಹುದಾಗಿದ್ದ ಈ ರಮ್ಯ ಸಾಗರ–ಭೂ ಪರಿಸರದ ನೋಟವೀಗ ಉಡುಪಿ ಜಿಲ್ಲೆಯ ಅರಣ್ಯ ಇಲಾಖೆಯ ಅನುಮತಿ ಪಡೆದು ವೀಕ್ಷಿಸಬೇಕು.

ವಿಹಂಗಮ ಭೂ ದೃಶ್ಯವನ್ನು ಇಲ್ಲಿ ಆಸ್ವಾದಿಸಲು ಬೈಂದೂರು ವಲಯದ ಪಡುವರಿ ಗ್ರಾಮ ಅರಣ್ಯ ಸಮಿತಿಯ ಸುಪರ್ದಿಗೆ ಒಳಪಟ್ಟಿದ್ದು ವಯಸ್ಕರಿಗೆ ₹ 10 ಪ್ರವೇಶ ಶುಲ್ಕ ತೆರಬೇಕು. ಈ ಪರಿಸರದಲ್ಲಿ ಗಿಡುಗ ಹಾಗೂ ನವಿಲುಗಳು ಹೇರಳವಾಗಿ ಕಂಡು ಬರುತ್ತದೆ. ಮಂಗಗಳೂ ಇದ್ದಾವೆನ್ನಿ! ಆದಾಗ್ಯೂ ಕೃತಕ ಅರಣ್ಯ ಪರಿಸರ ಅಷ್ಟೇನೂ ಚೆನ್ನಾಗಿಲ್ಲ. ಕಾರಣ ಅಕೇಶಿಯ,ಸುಬಾಬುಲ್ ಗಿಡಮರಗಳು ನೈಸರ್ಗಿಕ ಅರಣ್ಯಕ್ಕೆ ಶೋಭೆ ತರುವುದಿಲ್ಲ. ಆದ್ದರಿಂದ ಪಶುಪಕ್ಷಿಗಳ ಜೀವನಾಧಾರವಾದ ಹೂಹಣ್ಣು, ಕಾಡು ಹಣ್ಣುಗಳ ಗಿಡಮರಬಳ್ಳಿಗಳನ್ನು ಬೆಳೆಸಿ ನೈಸರ್ಗಿಕ ಅರಣ್ಯಪರಿಸರವನ್ನು ಬೆಳೆಸುವ ಅಗತ್ಯವಿದೆ. ಆಗ ಮಾತ್ರ ನಮ್ಮ ಅರಣ್ಯ ಜೀವಿಪರಿಸರ ರಕ್ಷಣೆಯ ಉದ್ದೇಶ ಸಾರ್ಥಕವಾಗುತ್ತದೆ.

–ಚನ್ನಬಸವ ಪುತ್ತೂರ, ಚಿತ್ರದುರ್ಗ





# ಚಂದದ ಕಣಜದ ಗೂಡು

ಒಂದು ಕಣಜ ಏನೋ ವಸ್ತುವನ್ನು ಎತ್ತಿಕೊಂಡು ಬಂದು ನಮ್ಮ ಮನೆಯ ಕಿಟಕಿಯ ಮೇಲೆ ಕುಳಿತುಕೊಂಡಿತು. ಅದು ಏನು ಮಾಡುತ್ತದೆ ಎಂಬ ಕುತೂಹಲದಿಂದ ನಾವು ನೋಡುತ್ತಿದ್ದರೆ, ಅದು ಗೋಡುಕಟ್ಟಲು ಮಣ್ಣನ್ನು ತಂದಿತ್ತು. ಗೂಡು ಕಟ್ಟುವುದು ಕೆಲಸ ಶುರುವಾಯಿತು. ತಂದ ಮಣ್ಣು ಮುಗಿದ ನಂತರ ಮತ್ತೆ, ಮತ್ತೆ ಮಣ್ಣುತಂದು ಚಿತ್ರದಲ್ಲಿರುವಂತೆ ಗೂಡು ಕಟ್ಟಿತು. ಹಂತ ಹಂತವಾಗಿ ಅದರ ಚಿತ್ರವನ್ನು ಮಗಳು ಶ್ವೇತಾ ಕ್ಲಿಕ್ಕಿಸಿರುವಳು. ಕೊನೆಯಲ್ಲಿ ಗೂಡಿನ ಬಾಯಿ ಮುಚ್ಚಿ ಆ ಕಣಜ ಹೊರಟುಹೋಯಿತು.

–ಕೆ.ಎಸ್. ಸವಿತ, ಬೆಂಗಳೂರು

# ಕಣ್ಮನ ಸೆಳೆಯುವ ಗಿಟಾರ್

ಇತ್ತೀಚೆಗೆ ವಿದೇಶ ಪ್ರವಾಸದಲ್ಲಿ 'ಅಟ್ಲಾಂಟಿಕ' ನಗರಿಗೆ ಹೋದಾಗ ಹೋಟೆಲಿನ ಎದುರು ಮನ ಸೆಳೆಯುವ ಗಿಟಾರ್ ನೋಡಿದೆವು. ಸ್ವಲ್ಪ ಏರು ಹಸಿರ–ಹಾಸಿನ, ಟುಲಿಪ್ ಹೂಗಳ ಮಧ್ಯದಲ್ಲಿ ನಾಲ್ಕಾಳೆತ್ತರದ ಗಿಟಾರ್ ಕಣ್ಮನ ಸೆಳೆಯುವಂತಿತ್ತು. ವಿದೇಶದಲ್ಲಿ ಮುಖ್ಯ ಸಂಗೀತ ವಾದ್ಯವಾಗಿರುವ ಗಿಟಾರ್, ದಿನವೂ ಹೋಟೆಲಿನ ಪ್ರಾಂಗಣದಲ್ಲಿ ನಡೆಯುವ ಸಂಗೀತ ಕಾರ್ಯಕ್ರಮಕ್ಕೆ ದ್ಯೋತಕದಂತಿತ್ತು.

ರಾತ್ರಿಯಲ್ಲಂತೂ ಅದರ ತಂತಿಗಳು ಒಂದರ ನಂತರ ಒಂದರಂತೆ ವೈವಿಧ್ಯದ ಬಣ್ಣ ಬದಲಿಸುತ್ತಾ ಹೋಟಲಿನ ಝಗಮಗಿಸುವ ವಿದ್ಯುದಲಂಕಾರಕ್ಕೆ ಮೆರಗು ನೀಡಿ ಗಂಧರ್ವಲೋಕ ಸೃಷ್ಟಿಸಿತ್ತು. ಸಂಗೀತ ಕೇಳಲಿ, ಬಿಡಲಿ ಎಲ್ಲರೂ ಅದರ ಹತ್ತಿರ ವಿವಿಧ ಭಂಗಿಗಳಲ್ಲಿ ಛಾಯಾ ಚಿತ್ರ ಸೆರೆಹಿಡಿಯುತ್ತಾ ಸಂಗೀತ ವಾದ್ಯದ ಅಸ್ಮಿತೆಗೆ ಒಳಗಾಗಿದ್ದರು.

–ಮಾನಸ ಶಿವರಾಮಕೃಷ್ಣ

